# ಕರ್ನಾಟಕ ವಿಧಾನ ಪರಿಷತ್ತು

ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ, ಮಾನ್ಯ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರು ಇವರು ಮಾದಕ ವಸ್ತುಗಳಿಗಿಂತ ಹೆಚ್ಚು ಅಪಾಯಕಾರಿಯಾಗಿರುವ ಹಾಗೂ ಜನಸಾಮಾನ್ಯರು ಬಳಸುವ ದಿನನಿತ್ಯದ ಆಹಾರ ಪದಾರ್ಥಗಳಲ್ಲಿ ಮಾಡಲಾಗುತ್ತಿರುವ ಕಲಬೆರಕೆಯಿಂದ ರಾಜ್ಯದ ಜನರು ಅಪಾಯವನ್ನು ಎದುರಿಸುತ್ತಿದ್ದಾರೆ. ಗ್ರಾಹಕರು ವಿವಿಧ ಬ್ರಾಂಡ್‌ಗಳ ಮೇಲೆ ನಂಬಿಕೆಯನ್ನಿಟ್ಟು ಖರೀದಿಸುವ ಆಹಾರ ಪದಾರ್ಥಗಳಾದ ಖಾದ್ಯ ಎಣ್ಣೆ, ತುಪ್ಪ, ಸಕ್ಕರೆ, ಬೆಲ್ಲ, ಜೇನುತುಪ್ಪ, ಕಾಫೀ, ಟೀ, ಅರಿಶಿನ ಟೋಮೋಟೋ ಸಾಸ್ ಮುಂತಾದವುಗಳಿಗೆ ಅಧಿಕ ಲಾಭದ ಆಸೆಗಾಗಿ ರಾಸಾಯನಿಕ ಪದಾರ್ಥಗಳನ್ನು ಮಿಶ್ರಣ ಮಾಡಿ ಜನರ ಆರೋಗ್ಯದೊಂದಿಗೆ ಚೆಲ್ಲಾಟವಾಡಲಾಗುತ್ತಿದೆ. ಅಡುಗೆಗೆ ಬಳಸುವ ಎಣ್ಣೆಗಳಲ್ಲಿ ಕಡಿಮೆ ಬೆಲೆಗೆ ದೊರಕುವ ಪೆಟ್ರೋಲಿಯಂ ಉಪ ಉತ್ಪನ್ನಗಳಾದ ಮಿನರಲ್ ಆಯಿಲ್‌ಗಳನ್ನು ಬಳಸಲಾಗುತ್ತಿದ್ದು, ಇದು ಕ್ಯಾನ್ಸರ್ ನಂತಹ ಮಾರಣಾಂತಿಕ ಕಾಯಿಲೆಗೆ ಕಾರಣವಾಗುತ್ತಿದೆ. ತುಪ್ಪದ ಕಲಬೆರಕೆಗೆ ಬಳಸಲಾಗುವ ವನಸ್ಪತಿ, ಕಾಫಿ ತಯಾರಿಕೆಯಲ್ಲಿ ಬಳಸುವ ಚಿಕೋರಿ, ಅರಿಶಿನ ಪುಡಿಯ ಕಲಬೆರಕೆಗೆ ಬಳಸುವ ಸತುವಿನ ಪುಡಿ, ಆರ್ಸೆನಿಕ್ ಪುಡಿಗಳ ಸೇವನೆಯು ಜೀವಕ್ಕೆ ಕಂಟಕವನ್ನುಂಟು ಮಾಡುತ್ತದೆ.

ಪ್ರಾಕೃತಿಕವಾಗಿ ದೊರಕುವ ಹಣ್ಣುಗಳ ಸ್ವಾದವನ್ನು ಹೆಚ್ಚಿಸಲು, ನಿಯಂತ್ರಿತವಾಗಿ ಕಾಯಿಯನ್ನು ಹಣ್ಣು ಮಾಡಲು ಮತ್ತು ದೀರ್ಘಕಾಲೀನ ಬಾಳಿಕೆಗೆ ರಾಸಾಯನಿಕಗಳನ್ನು ಚುಚ್ಚುಮದ್ದುಗಳ ಮೂಲಕ ನೀಡಲಾಗುತ್ತಿದೆ. ಇವುಗಳಲ್ಲದೇ ಹಲವಾರು ಹೋಟೆಲ್‌ಗಳಲ್ಲಿ ಮತ್ತು ಫಾಸ್ಟ್ ಫುಡ್ ಅಂಗಡಿಗಳಲ್ಲಿ ಪದಾರ್ಥಗಳ ರುಚಿಯನ್ನು ಹೆಚ್ಚಿಸಲು ಯಥೇಚ್ಚವಾಗಿ ಬಳಸುವ ಅಜಿನೋಮೊಟೋ ಮತ್ತು ಪದಾರ್ಥಗಳ ಆಕರ್ಷಣೆಯನ್ನು ಉಂಟುಮಾಡಲು ಬಳಸುವ ಬಣ್ಣಗಳು ಗ್ರಾಹಕರನ್ನು ವ್ಯಸನಿಗಳಾಗಿ ಮಾಡುತ್ತವೆ. ಇದರ ಸೇವನೆಯಿಂದ ಹೊಟ್ಟೆ ಮತ್ತು ಕಿಡ್ನಿ ಸಂಬಂಧಿತ ದೀರ್ಘಕಾಲೀನ ರೋಗಗಳಿಗೆ ಕಾರಣವಾಗಿರುತ್ತದೆ.

ಈ ಕಾರಣದಿಂದ ಜನ ಸಾಮಾನ್ಯರ ಆರೋಗ್ಯದ ರಕ್ಷಣೆಗಾಗಿ ಈ ಆಹಾರ ಕಲಬೆರಕೆ ಮಾಡುವುದನ್ನು ನಿಯಂತ್ರಿಸುವುದು ಹಾಗೂ ಕಲಬೆರಕೆ ಮಾಡುವವರ ವಿರುದ್ಧ ಕಠಿಣ ಕ್ರಮವನ್ನು ವಹಿಸುವ ಕುರಿತು ನಿಯಮ 72ರ ಅಡಿಯಲ್ಲಿ ನೀಡಿರುವ ಸೂಚನೆಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಹೇಳಿಕೆ:

********

ಕೇಂದ್ರ ಸರ್ಕಾರವು ಆಹಾರ ಕಲಬೆರಕೆ ತಡೆಕಾಯ್ದೆ 1954ನ್ನು ನಿರಶನಗೊಳಿಸಿ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ 2006 ಅನ್ನು ಜಾರಿಗೆ ತಂದಿರುತ್ತದೆ. ಈ ಕಾಯ್ದೆಯ ಪ್ರಕಾರ ರಾಜ್ಯದಲ್ಲಿ ಆಹಾರ ಕಲಬೆರಕೆಯನ್ನು ತಡೆಗಟ್ಟಲು ಆಹಾರ ಮಾದರಿಗಳ ಕಾನೂನಾತ್ಮಕ ಹಾಗೂ ಸರ್ವೆ ಸ್ಯಾಂಪಲ್‌ಗಳನ್ನು ಸಂಗ್ರಹಿಸಿ ರಾಜ್ಯದ ವಿವಿಧ ಪ್ರಯೋಗಾಲಯಗಳಲ್ಲಿ ಪರೀಕ್ಷೆಗೆ ಒಳಪಡಿಸಲಾಗಿ, ಅಸುರಕ್ಷಿತ, ಸಬ್‌ಸ್ಟ್ಯಾಂಡರ್ಡ್, ಮಿಸ್‌ಬ್ರ್ಯಾಂಡೆಡ್ ಎಂಬ ವರದಿಯನ್ವಯ ಎಫ್.ಎಸ್.ಎಸ್.ಎ ಕಾಯ್ದೆಯಂತೆ ಕ್ರಮ ವಹಿಸಲಾಗುತ್ತಿದೆ. ಕಳೆದ ಸಾಲಿನಲ್ಲಿ ಒಟ್ಟು 4551 ಕಾನೂನಾತ್ಮಕ ಆಹಾರ ಮಾದರಿಗಳನ್ನು ಸಂಗ್ರಹಿಸಿ ವಿವಿಧ ಪ್ರಯೋಗಾಲಯಗಳಲ್ಲಿ ಪರೀಕ್ಷಿಸಲಾಗಿದೆ. ಅದರಂತೆ, 93 ಮಾದರಿಗಳು ಅಸುರಕ್ಷತೆ, 123 ಸಬ್ ಸ್ಟ್ರಾಂಡಡ್, 249 ಮಿಸ್ ಬ್ರಾಂಡಡ್ ಎಂದು ವರದಿಯಾಗಿರುತ್ತದೆ. ಈ ಎಲ್ಲಾ ಪ್ರಕರಣಗಳಲ್ಲಿ ಎಫ್‌ಎಫ್‌ಎಸ್‌ಎ ಕಾಯ್ದೆಯಂತೆ ಕ್ರಮ ಕೈಗೊಳ್ಳಲಾಗುತ್ತಿದೆ.

## ಅಡುಗೆಎಣ್ಣೆ

ದಿನನಿತ್ಯ ಸೇವಿಸುವ ಆಹಾರ ಪದಾರ್ಥಗಳಲ್ಲಿ ಬಳಸುವ ಅಡುಗೆ ಎಣ್ಣೆಗೆ ವಿವಿಧ ರಾಸಾಯನಿಕ ಅಂಶಗಳನ್ನು ಹೊಂದಿರುವ ಮಿನರಲ್ ಆಯಿಲ್ ಹಾಗೂ ಇನ್ನಿತರೆ ಕೆಳದರ್ಜೆಯ ವಸ್ತುಗಳನ್ನು ಬೆರಸಲಾಗುತ್ತಿರುವುದನ್ನು ತಡೆಗಟ್ಟಲು ಜನವರಿ 2019 ರಿಂದ ಸೆಪ್ಟೆಂಬರ್ 2020ರ ವರೆಗೂ 483 ಎಣ್ಣೆ ಮಾದರಿಗಳು ವಿಶ್ಲೇಷಣೆಯಾಗಿದ್ದು, ಅದರಲ್ಲಿ 19 ಮಾದರಿಗಳು Substandard ಹಾಗೂ 10 ಮಾದರಿಗಳು Misbranded ಎಂದು ವರದಿಯಾಗಿದ್ದು, ಎಫ್.ಎಸ್.ಎಸ್.ಎ ಕಾಯ್ದೆ ಪ್ರಕಾರ ಕ್ರಮವಹಿಸಲಾಗಿದೆ.

ಕೇಂದ್ರ ಎಫ್.ಎಸ್.ಎಸ್.ಎ ಅಡಿಯಲ್ಲಿ ಅಡುಗೆ ಎಣ್ಣೆ ವಿಶೇಷ ಆಂದೋಲನ ಕೈಗೊಂಡು ಆಗಸ್ಟ್ 2020ರ ಮಾಹೆಯಲ್ಲಿ ವಿವಿಧ ಬ್ರ್ಯಾಂಡ್‌ಗಳ ಸುಮಾರು 270 ಸರ್ವೆ ಆಹಾರ ಮಾದರಿಗಳನ್ನು ಸಂಗ್ರಹಿಸಿ ನೋಂದಾಯಿತ ಪ್ರಯೋಗಾಲಯಗಳಿಗೆ ವಿಶ್ಲೇಷಣೆಗೆ ಕಳುಹಿಸಲಾಗಿದೆ, ವರದಿಯು ನಿರೀಕ್ಷಣಾ ಹಂತದಲ್ಲಿರುತ್ತದೆ.

**ಬೆಣ್ಣೆ ಮತ್ತು ತುಪ್ಪ**

ಏಪ್ರಿಲ್ 2017 ರಿಂದ ಸೆಪ್ಟೆಂಬರ್ 2020ರ ವರೆಗೆ ಒಟ್ಟು 275 ಬೆಣ್ಣೆ ಮತ್ತು ತುಪ್ಪದ ಮಾದರಿಗಳನ್ನು ಸಂಗ್ರಹಿಸಿ ಗುಣ ವಿಶ್ಲೇಷಣೆಗೆ ಒಳಪಡಿಸಿದ್ದು, 14 ಮಾದರಿಗಳು ಅಸುರಕ್ಷಿತ, 21 ಮಾದರಿ ಸಬ್ ಸ್ಟಾಂಡರ್ಡ್ ಹಾಗೂ 03 ಮಾದರಿಗಳು ಮಿಸ್ ಬ್ರಾಂಡಡ್ ಎಂದು ವರದಿಯಾಗಿರುತ್ತದೆ.

ಮೇಲಿನ ವರದಿಯಂತೆ 14 ಪ್ರಕರಣಗಳನ್ನು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಮೊಕದ್ದಮೆಯನ್ನು ದಾಖಲಿಸಲಾಗಿದೆ. 24 ಪ್ರಕರಣಗಳನ್ನು ಅಪರ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ದಾಖಲಿಸಲಾಗಿದೆ.

ರಾಜ್ಯ ಎಫ್.ಎಸ್.ಎಸ್.ಎ ವತಿಯಿಂದ ಆಗಸ್ಟ್ – ಸೆಪ್ಟೆಂಬರ್ ಮಾಹೆಯಲ್ಲಿ ವಿಶೇಷ ಆಂದೋಲನ ಕೈಗೊಂಡು ವಿವಿಧ ಬೆಣ್ಣೆ ಮತ್ತು ತುಪ್ಪದ ಬ್ರ್ಯಾಂಡ್‌ಗಳ ಸುಮಾರು 38 ಕಾನೂನಾತ್ಮಕ ಆಹಾರ ಮಾದರಿಗಳನ್ನು ಸಂಗ್ರಹಿಸಿ ವಿಭಾಗೀಯ ಆಹಾರ ಪ್ರಯೋಗಾಲಯಗಳಿಗೆ ವಿಶ್ಲೇಷಣೆಗೆ ಕಳುಹಿಸಲಾಗಿದೆ. ವರದಿಯು ನಿರೀಕ್ಷಣಾ ಹಂತದಲ್ಲಿರುತ್ತದೆ.

**ಸಕ್ಕರೆ**

ರಾಜ್ಯದಲ್ಲಿ ಏಪ್ರಿಲ್ 2017 ರಿಂದ ಸೆಪ್ಟೆಂಬರ್ 2020 ರವರೆಗೆ 508 ಸಕ್ಕರೆ ಆಹಾರ ಮಾದರಿಗಳನ್ನು ಸಂಗ್ರಹಿಸಿ ಪ್ರಯೋಗಾಲಯಕ್ಕೆ ವಿಶ್ಲೇಷಣೆಗೆ ಒಳಪಡಿಸಿದ್ದು, 08 ಅಸುರಕ್ಷಿತ, 04 ಸಬ್ ಸ್ಟ್ಯಾಂಡರ್ಡ್ ಹಾಗೂ 06 ಮಿಸ್‌ಬ್ರ್ಯಾಂಡ್ ಎಂದು ವರದಿಯಾಗಿದ್ದು, ಎಫ್.ಎಸ್.ಎಸ್.ಎ ಕಾಯ್ದೆ ಪ್ರಕಾರ ಕ್ರಮವಹಿಸಲಾಗಿದೆ.

**ಬೆಲ್ಲ**

ರಾಜ್ಯದಲ್ಲಿ ಏಪ್ರಿಲ್ 2017 ರಿಂದ ಸೆಪ್ಟೆಂಬರ್ 2020 ರವರೆಗೆ 131 ಬೆಲ್ಲದ ಆಹಾರ ಮಾದರಿಗಳನ್ನು ಸಂಗ್ರಹಿಸಿ ಪ್ರಯೋಗಾಲಯಕ್ಕೆ ವಿಶ್ಲೇಷಣೆಗೆ ಒಳಪಡಿಸಿದ್ದು, 13 ಅಸುರಕ್ಷಿತ, 02 ಸಬ್ ಸ್ಟ್ಯಾಂಡರ್ಡ್ ಹಾಗೂ 06 ಮಿಸ್‌ಬ್ರ್ಯಾಂಡ್ ಎಂದು ವರದಿಯಾಗಿದ್ದು, ಎಫ್.ಎಸ್.ಎಸ್.ಎ ಕಾಯ್ದೆ ಪ್ರಕಾರ ಕ್ರಮವಹಿಸಲಾಗಿದೆ.

ರಾಜ್ಯ ಎಫ್.ಎಸ್.ಎಸ್.ಎ ವತಿಯಿಂದ ಆಗಸ್ಟ್ – ಸೆಪ್ಟೆಂಬರ್ 2020 ರ ಮಾಹೆಯಲ್ಲಿ ವಿಶೇಷ ಆಂದೋಲನ ಕೈಗೊಂಡು ವಿವಿಧ ಬ್ರ್ಯಾಂಡ್‌ಗಳ ಸುಮಾರು 20 ಕಾನೂನಾತ್ಮಕ ಆಹಾರ ಮಾದರಿಗಳನ್ನು ಸಂಗ್ರಹಿಸಿ ವಿಭಾಗೀಯ ಆಹಾರ ಪ್ರಯೋಗಾಲಯಗಳಿಗೆ ವಿಶ್ಲೇಷಣೆಗೆ ಕಳುಹಿಸಲಾಗಿದೆ, ವರದಿಯು ನಿರೀಕ್ಷಣಾ ಹಂತದಲ್ಲಿರುತ್ತದೆ.

**ಜೇನುತುಪ್ಪ**

ಈ ಸಂಬಂಧ ರಾಜ್ಯದಲ್ಲಿ 2017 ರಿಂದ ಸೆಪ್ಟೆಂಬರ್ 2020 ವರೆಗೆ ಸುಮಾರು 75 ಜೇನುತುಪ್ಪ ಆಹಾರ ಮಾದರಿಯನ್ನು ಸಂಗ್ರಹಿಸಿ ಪ್ರಯೋಗಾಲಯಕ್ಕೆ ವಿಶ್ಲೇಷಣೆಗೆ ಒಳಪಡಿಸಲಾಗಿದ್ದು, ಅದರಲ್ಲಿ 01 ಮಾದರಿಯು Substandard ಹಾಗೂ 01 ಮಾದರಿಯು Misbranded ಎಂದು ವರದಿಯಾಗಿದ್ದು, ಎಫ್.ಎಸ್.ಎಸ್.ಎ ಕಾಯ್ದೆ ಪ್ರಕಾರ ಕ್ರಮವಹಿಸಲಾಗಿದೆ.

ರಾಜ್ಯ ಎಫ್.ಎಸ್.ಎಸ್.ಎ ವತಿಯಿಂದ ಆಗಸ್ಟ್ – ಸೆಪ್ಟೆಂಬರ್ 2020ರ ಮಾಹೆಯಲ್ಲಿ ವಿಶೇಷ ಆಂದೋಲನ ಕೈಗೊಂಡು ವಿವಿಧ ಬ್ರ್ಯಾಂಡ್‌ಗಳ ಸುಮಾರು 08 ಕಾನೂನಾತ್ಮಕ ಆಹಾರ ಮಾದರಿಗಳನ್ನು ಸಂಗ್ರಹಿಸಿ ವಿಭಾಗೀಯ ಆಹಾರ ಪ್ರಯೋಗಾಲಯಗಳಿಗೆ ವಿಶ್ಲೇಷಣೆಗೆ ಕಳುಹಿಸಲಾಗಿದೆ. ವರದಿಯು ನಿರೀಕ್ಷಣಾ ಹಂತದಲ್ಲಿರುತ್ತದೆ.

**ಕಾಫಿ ಮತ್ತು ಚಹಾ ಪುಡಿ**

2019–20ನೇ ಸಾಲಿನಲ್ಲಿ ಒಟ್ಟು 222 ಕಾಫೀ/ಟೀ ಪುಡಿಗಳ ಮಾದರಿಗಳನ್ನು ಸಂಗ್ರಹಿಸಿ ಗುಣ ವಿಶ್ಲೇಷಣೆಗೆ ಒಳಪಡಿಸಿದ್ದು, 08 ಮಾದರಿಗಳು ಅಸುರಕ್ಷಿತ, 01 ಮಾದರಿಯು ಸಬ್ ಸ್ಟಾಂಡರ್ಡ್ ಹಾಗೂ 04 ಮಾದರಿಗಳು ಮಿಸ್ ಬ್ರಾಂಡಡ್ ಎಂದು ವರದಿಯಾಗಿರುತ್ತದೆ.

ಮೇಲಿನ ವರದಿಯಂತೆ 08 ಪ್ರಕರಣಗಳನ್ನು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಮೊಕದ್ದಮೆಯನ್ನು ದಾಖಲಿಸಲಾಗಿದೆ. 05 ಪ್ರಕರಣಗಳನ್ನು ಅಪರ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ದಾಖಲಿಸಲಾಗಿದೆ.

ರಾಜ್ಯ ಎಫ್.ಎಸ್.ಎಸ್.ಎ ವತಿಯಿಂದ ಆಗಸ್ಟ್ – ಸೆಪ್ಟೆಂಬರ್ ಮಾಹೆಯಲ್ಲಿ ವಿಶೇಷ ಆಂದೋಲನ ಕೈಗೊಂಡು ವಿವಿಧ ಬ್ರ್ಯಾಂಡ್‌ಗಳ ಸುಮಾರು 50 ಕಾನೂನಾತ್ಮಕ ಆಹಾರ ಮಾದರಿಗಳನ್ನು ಸಂಗ್ರಹಿಸಿ ವಿಭಾಗೀಯ ಆಹಾರ ಪ್ರಯೋಗಾಲಯಗಳಿಗೆ ವಿಶ್ಲೇಷಣೆಗೆ ಕಳುಹಿಸಲಾಗಿದೆ. ವರದಿಯು ನಿರೀಕ್ಷಣಾ ಹಂತದಲ್ಲಿರುತ್ತದೆ.

**ಟೊಮೋಟೋ ಸಾಸ್**

ಏಪ್ರಿಲ್ 2017 ರಿಂದ ಸೆಪ್ಟೆಂಬರ್ 2020ರ ವರೆಗೆ ಒಟ್ಟು 49 ಟೊಮೋಟೋ ಸಾಸ್ ಮಾದರಿಗಳನ್ನು ಸಂಗ್ರಹಿಸಿ ಗುಣ ವಿಶ್ಲೇಷಣೆಗೆ ಒಳಪಡಿಸಿದ್ದು, 15 ಮಾದರಿಗಳು ಅಸುರಕ್ಷಿತ ಹಾಗೂ 04 ಮಾದರಿ ಸಬ್ ಸ್ಟಾಂಡರ್ಡ್ ಎಂದು ವರದಿಯಾಗಿದ್ದು, ಎಫ್.ಎಸ್.ಎಸ್.ಎ ಕಾಯ್ದೆ ಪ್ರಕಾರ ಕ್ರಮವಹಿಸಲಾಗಿದೆ.

ಮೇಲಿನ ವರದಿಯಂತೆ 04 ಪ್ರಕರಣಗಳನ್ನು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಮೊಕದ್ದಮೆಯನ್ನು ದಾಖಲಿಸಲಾಗಿದೆ. ಸದರಿ ನ್ಯಾಯಾಲಯದಲ್ಲಿ 4 ಪ್ರಕರಣಗಳಿಗೆ ರೂ.25,000/– ದಂಡ ವಿಧಿಸಲಾಗಿದೆ.

**ಆಕುಕ 126 ಎಸ್‌ಬಿವಿ 2020**

(ಬಿ. ಶ್ರೀರಾಮುಲು)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು